142 (130) ಶ್ರೀ ರಘುಪತಿ ಭಟ್ ಕೆ. (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಉಡುಪಿ ಜಿಲ್ಲೆ ಹಾಗೂ ಉಡುಪಿ ವಿಧಾನ ಸಭಾ ಕ್ಷೇತ್ರದಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ವಸತಿ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದವರೆಷ್ಟು ;

ಆ) ಪ್ರಸಕ್ತ ಸಾಲಿಗೆ ಉಡುಪಿ ಜಿಲ್ಲೆಯಲ್ಲಿ ಕ್ಷೇತ್ರವಾರು ಬಿಡುಗಡೆ ಮಾಡಿದ ಮನೆಗಳು ಎಷ್ಟು ;

ಇ) ಮುಂದಿನ ಸಾಲಿಗೆ ಉಡುಪಿ ಕ್ಷೇತ್ರಕ್ಕೆ ಎಷ್ಟು ಮತ್ಸ್ಯಾಶ್ರಯ ಮನೆಗಳನ್ನು ನೀಡಲು ನಿರ್ಧರಿಸಿರುತ್ತದೆ ?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು):

ಅ) ವಸತಿ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಕೆಳಕಂಡಂತಿದೆ.

1) ಉಡುಪಿ ಜಿಲ್ಲೆ 1975

2) ಉಡಪಿ ವಿಧಾನಸಭೆ ಕ್ಷೇತ್ರ 221

ಆ) ಪ್ರಸಕ್ತ ಸಾಲಿಗೆ (2006–07) ಮತ್ಸ್ಯಾಶ್ರಯ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ ಕ್ಷೇತ್ರವಾರು ಮಂಜೂರು ಮಾಡಿರುವ ಮನೆಗಳ ವಿವರ ಕೆಳಕಂಡಂತಿದೆ :

ಕ್ರಮ ಸಂಖ್ಯೆ	ಕ್ಷೇತ್ರ	ಮಂಜೂರಾದ ಮನೆಗಳ ಸಂಖ್ಯೆ
1)	ಕಾಪು	80
2)	ಉಡುಪಿ	60
3)	ಬ್ರಹ್ಮಾವರ	50
4)	ಕುಂದಾಪುರ	100
5)	ಬೈಂದೂರು	40
6)	ಕಾರ್ಕಳ	20
	ಒಟ್ಟು	350

ಇ) ಮುಂದಿನ ಸಾಲಿಗೆ ಲಭ್ಯವಾಗುವ ಅನುದಾನವನ್ನು ಆಧರಿಸಿ ಮನೆಗಳ ಸಂಖ್ಯೆಯನ್ನು ನಿರ್ಧರಿಸಲಾಗುವುದು.

144 (229) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯದಾದ್ಯಂತ ಮುಜರಾಯಿ ಇಲಾಖೆಗೆ ಸೇರಿದ ಎಲ್ಲಾ ದೇವಸ್ಥಾನಗಳಲ್ಲಿರುವ ಅರ್ಚಕ ಹಾಗೂ ಇತರೇ ಸಿಬ್ಬಂದಿಗಳ ಒಟ್ಟು ಸಂಖ್ಯೆ : ಎಷ್ಟು (ದೇವಸ್ಥಾನವಾರು, ಅರ್ಚಕರವಾರು ಹಾಗೂ ಸಿಬ್ಬಂದಿವಾರು ಮಾಹಿತಿ ನೀಡುವುದು) ;

ಆ) ಈ ದೇವಸ್ಥಾನಗಳಲ್ಲಿರುವ ಅರ್ಚಕರ ಹಾಗೂ ಸಿಬ್ಬಂದಿಗಳ ರಾಜ್ಯ ಸಂಘಟನೆಯವರು ಸರ್ಕಾರದ ಮುಂದೆ ಇಟ್ಟಿರುವ ಬೇಡಿಕೆಗಳೇನು ;

ಇ) ಈ ಬೇಡಿಕೆಗಳ ಪೈಕಿ ಈಗಾಗಲೇ ಈಡೇರಿಸಿರುವ ಬೇಡಿಕೆಗಳು ಯಾವುವು ;

ಈ) ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಯಾವ ಕ್ರಮವಹಿಸಿದೆ?

ಶ್ರೀ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು):

ಅ) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಸಂಖ್ಯೆ: 34194 ಈ ದೇವಸ್ಥಾನಗಳಲ್ಲಿರುವ, ಸಂಸ್ಥೆವಾರು ಅರ್ಚಕವಾರು ಹಾಗೂ ಇತರೆ ಸಿಬ್ಬಂದಿವಾರು ವಿವರಗಳು ತಕ್ಷಣದಲ್ಲಿ ಲಭ್ಯವಿಲ್ಲ. ಅದನ್ನು ಕ್ರೂಢೀಕರಿಸಿ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

ಆ) ದಿನಾಂಕ 24.6.99ರಲ್ಲಿ ಅಖಿಲ ಭಾರತ ಹಿಂದು ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಒಕ್ಕೂಟದವರು ಅರ್ಚಕರ ಬೃಹತ್ ವಿಧಾನಸೌಧ ಚಲೋ ಸ್ಪಂದರ್ಭದಲ್ಲಿ ಸರ್ಕಾರದ ಮುಂದೆ ಇಟ್ಟಿರುವ ಪ್ರಮುಖ ಬೇಡಿಕೆಗಳು ಕೆಳಕಂಡಂತೆ ಇದೆ :-

1) ತಸ್ಥೀಕ್‌ನ್ನು ಹೆಚ್ಚಿಸುವುದು

2) ಏಕರೂಪಶಾಸನ ಜಾರಿಗೆ ತರುವುದು

3) ಗ್ರಾಮಗಳಲ್ಲಿ ಅರ್ಚಕರು ಮತ್ತು ಸಿಬ್ಬಂದಿಯವರಿಗೆ ಆಗುತ್ತಿರುವ ಕಿರುಕುಳಗಳಿಗೆ ಪೊಲೀಸ್ ರಕ್ಷಣೆ

4) ತಸ್ಥೀಕ್ ಅಂತಿಮಗೊಳಿಸದೇ ಇರುವ ಸಂಸ್ಥೆಗಳಿಗೆ ಕೂಡಲೇ ತಸ್ಥೀಕ್ ನಿಗಧಿಪಡಿಸುವುದು.